# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ ಇವರು ಆರ್ಥಿಕ ಮಂತ್ರಾಲಯ, ನವದೆಹಲಿ ಇವರ ವತಿಯಿಂದ ದಿನಾಂಕ 6.11.2015ರಂದು ನವದೆಹಲಿಯಲ್ಲಿ ನಡೆಯಲಿರುವ 6ನೇ DEC ಅಂತರ ರಾಷ್ಟ್ರೀಯ ಸಭೆಯಲ್ಲಿ ಭಾಗವಹಿಸಲು ಎಂ.ಎಸ್.ಐ.ಎಲ್. ರವರಿಂದ ಖರೀದಿಸಿದ ವಿಮಾನ ಪ್ರಯಾಣ ಟಿಕೇಟನ್ನು ರದ್ದುಗೊಳಿಸಿರುವುದಕ್ಕೆ ತಗುಲಿದ ರದ್ದತಿ ಶುಲ್ಕವನ್ನು ಎಂ.ಎಸ್.ಐ.ಎಲ್. ರವರಿಗೆ ಪಾವತಿಸಲು ಸರ್ಕಾರದ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ: ಸರ್ಕಾರಿ ಆದೇಶ ಸಂಖ್ಯೆ: ಪಿಡಿ 2 ಎಸ್‌ಪಿಬಿ 2015 ದಿನಾಂಕ 2.11.2015

*****

ಪ್ರಸ್ತಾವನೆ:

ಶ್ರೀಮತಿ ಬಿದಿಶಾ ಚೌಧುರಿ, ಐಎಎಸ್, ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ ಇವರು ಆರ್ಥಿಕ ಮಂತ್ರಾಲಯ, ನವದೆಹಲಿ ಇವರ ವತಿಯಿಂದ ದಿನಾಂಕ 6.11.2015ರಂದು ನವದೆಹಲಿಯಲ್ಲಿ ನಡೆಯಲಿರುವ 6ನೇ DEC ಅಂತರ ರಾಷ್ಟ್ರೀಯ ಸಭೆಯಲ್ಲಿ ಭಾಗವಹಿಸಲು ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ ಅನುಮತಿ ನೀಡಲಾಗಿತ್ತು.

ಅದರಂತೆ ಸದರಿ ಸಭೆಯಲ್ಲಿ ಭಾಗವಹಿಸಲು ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿರವರು ಎಂ.ಎಸ್.ಎಲ್.ಐ. ರವರಿಂದ ವಿಮಾನ ಪ್ರಯಾಣ ಟಿಕೇಟನ್ನು ಖರೀದಿಸಿದ್ದು, ನಂತರ ಅನಾರೋಗ್ಯದ ನಿಮಿತ್ತ ಪ್ರಯಾಣವನ್ನು ರದ್ದುಗೊಳಿಸಿರುತ್ತಾರೆ ಹಾಗೂ ಟಿಕೇಟನ್ನು ರದ್ದುಗೊಳಿಸಿರುವುದಕ್ಕೆ ತಗುಲಿದ ರದ್ದತಿ ಶುಲ್ಕ ರೂ. 5,000/- ಗಳನ್ನು ಪಾವತಿಸುವಂತೆ ಕೋರಿ ಎಂ.ಎಸ್.ಎಲ್.ಐ. ರವರು ಬಿಲ್ಲನ್ನು ಸಲ್ಲಿಸಿರುತ್ತಾರೆ (ಬಿಲ್ಲು ಸಂಖ್ಯೆ:15 ದಿನಾಂಕ :03.11.2015). ಈ ಬಗ್ಗೆ ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ:

ಸರ್ಕಾರಿ ಆದೇಶ ಸಂಖ್ಯೆ: ಪಿಡಿ 2 ಎಸ್‌ಪಿಬಿ 2015 ಬೆಂಗಳೂರು, ದಿನಾಂಕ: 23-11-2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಬಿದಿಶಾ ಚೌಧುರಿ, ಐಎಎಸ್, ಕಾರ್ಯದರ್ಶಿ, ರಾಜ್ಯ ಯೋಜನಾ ಮಂಡಳಿ ಇವರು ಆರ್ಥಿಕ ಮಂತ್ರಾಲಯ, ನವದೆಹಲಿ ಇವರ ವತಿಯಿಂದ ದಿನಾಂಕ 6.11.2015ರಂದು ನವದೆಹಲಿಯಲ್ಲಿ ನಡೆಯಲಿರುವ 6ನೇ DEC ಅಂತರ ರಾಷ್ಟ್ರೀಯ ಸಭೆಯಲ್ಲಿ ಭಾಗವಹಿಸಲು ಎಂ.ಎಸ್.ಐ.ಎಲ್. ರವರಿಂದ ಖರೀದಿಸಿದ ವಿಮಾನ ಟಿಕೇಟನ್ನು ರದ್ದುಪಡಿಸಿರುವುದಕ್ಕೆ ತಗುಲಿದ ವೆಚ್ಚ ರೂ.5,000/-ಗಳನ್ನು ಎಂ.ಎಸ್.ಐ.ಎಲ್. ರವರಿಗೆ ಪಾವತಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಈ ಉದ್ದೇಶಕ್ಕಾಗಿ ತಗಲುವ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ 2015-16ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 3451-00-101-4-00-041(ಯೋಜನೇತರ) ಪ್ರಯಾಣ ವೆಚ್ಚಗಳಡಿ ಭರಿಸತಕ್ಕದ್ದು.

324

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಪಿಡಿ 113 ಎಸ್‌ಪಿಎಂ 96 ದಿನಾಂಕ 17.5.1997ರಲ್ಲಿ ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ ರವರಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಲಿತಾ)
ಸರ್ಕಾರದ ಅಧೀನ ಕಾರ್ಯದರ್ಶಿ ಎಸ್-3,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಕಾರ್ಯದರ್ಶಿಗಳು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ವಿಧಾನ ಸೌಧ ಬೆಂಗಳೂರು.
3. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು..
4. ಸರ್ಕಾರದ ಅಧೀನ ಕಾರ್ಯದರ್ಶಿ (ಎಸ್ 1&2)ಯೋಜನೆ ಕಾರ್ಯಕ್ರಮ ಸಂಯೋಜನೆ & ಸಾಂಖ್ಯಿಕ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು-01
5. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.